# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

☎:08352-229051 www.kswu.ac.in **Fax:** 08352 -229057

ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್-93/2016-17/1603 ದಿನಾಂಕ:20-09-2016

ಗೆ,
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ**: ದಿನಾಂಕ:09-09-2016 ರಂದು ಮಧ್ಯಾಹ್ನ 2:00ಗಂಟೆಗೆ ದುದ್ದುಪುಡಿ ವಸತಿ ಶಾಲೆ, ಪಿಡಬ್ಲೂಡಿ ಕ್ಯಾಂಪ್, ಸಿಂಧನೂರ ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 09-09-2016ರಂದು ಶುಕ್ರವಾರ ಮಧ್ಯಾಹ್ನ 2:00ಗಂಟೆಗೆ ದುದ್ದುಪುಡಿ ವಸತಿ ಶಾಲೆ, ಪಿಡಬ್ಲೂಡಿ ಕ್ಯಾಂಪ್, ಸಿಂಧನೂರನಲ್ಲಿ ಜರುಗಿದ "2016-17ನೇ ಹಣಕಾಸು ಸಾಲಿನ ನಾಲ್ಕನೆಯ ಹಾಗೂ 93ನೇ ಸಿಂಡಿಕೇಟ್ ಸಾಮಾನ್ಯ ಸಭೆಯ" ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ

**-sd-**

**ಕುಲಸಚಿವರು ಹಾಗೂ ಸದಸ್ಯ**
**ಕಾರ್ಯದರ್ಶಿಗಳು**
**ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ**

**ಅಡಕ: ನಡವಳಿಗಳು 1 ರಿಂದ 18 ಪುಟಗಳು**

<u>**ಪ್ರತಿಗಳು:-**</u>

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಅಪರ ಮುಖ್ಯ ಕಾರ್ಯದರ್ಶಿಗಳು , ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.

# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20–6–2016 | |
| 2. | 1(ಬಿ) | ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ಅಜೀಜ ಮಕಾಂದಾರ, ಡೀನರು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು | 28–10–2015 | 27–10–2016 |
| 5. | 1(ಇ) | ಡಾ.ಸರಸ್ವತಿ.ಎಸ್ | ಸದಸ್ಯರು | 01–12–2014 | 09-02-2017 |
| 6. | 1(ಇ) | ಡಾ.ಶ್ರೀನಿವಾಸ ಬಳ್ಳಿ | ಸದಸ್ಯರು | 01–12–2014 | 10–04–2017 |
| 7. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 8. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 9. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 10. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19–02–2015 | |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19–02–2015 | |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19–02–2015 | |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19–02–2015 | |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19–02–2015 | |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19–02–2015 | |
| 17. | 1(ಹೆಚ್) | ಪ್ರೊ.ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | ಸದಸ್ಯರು | 01–06–2016 | 31–05–2017 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14–7–2016 | |
| 22. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ್, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18–06–2016 | |

# ದಿನಾಂಕ:09–09–2016ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಸಹಕಾರವನ್ನು ಕೋರಿದರು.

**ಸಭೆಗೆ ಹಾಜರಾದ ಸದಸ್ಯರು**

1. ಪ್ರೊ. ಸಬಿಹಾ, ಕುಲಪತಿಗಳು : ಸಭಾಧ್ಯಕ್ಷರು
2. ಡಾ.ಸರಸ್ವತಿ ಎಸ್ : ಸದಸ್ಯರು
3. ಡಾ.ಶ್ರೀನಿವಾಸ ಬಳ್ಳಿ : ಸದಸ್ಯರು
4. ಡಾ.ಸತ್ಯಾನಂದ ಪಾತ್ರೋಟ : ಸದಸ್ಯರು
5. ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ : ಸದಸ್ಯರು
6. ಡಾ.ಫರ್ಜಾನಾ ಎಂ : ಸದಸ್ಯರು
7. ಡಾ.ಸುಜಾತಾ ಜಂಗಮಶೆಟ್ಟಿ : ಸದಸ್ಯರು
8. ಶ್ರೀ ಆರ್.ಬಿ.ಭಾವಿಕಟ್ಟಿ : ಸದಸ್ಯರು
9. ಶ್ರೀ ಆರ್.ಸಿ.ಪಾಟೀಲ : ಸದಸ್ಯರು
10. ಪ್ರೊ. ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ : ಸದಸ್ಯರು
11. ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) : ಸದಸ್ಯರು
12. ಪ್ರೊ.ಕೆ.ಪಿ.ಶ್ರೀನಾಥ, ಕುಲಸಚಿವರು : ಸದಸ್ಯ ಕಾರ್ಯದರ್ಶಿ

**ಸಭೆಗೆ ಗೈರು ಹಾಜರಾದ ಸದಸ್ಯರು**

1. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
2. ಪ್ರೊ. ಅಜೀಜ ಮಕಾಂದಾರ, ಡೀನರು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ : ಸದಸ್ಯರು
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
6. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
7. ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬೆಂಗಳೂರು : ಸದಸ್ಯರು

ದಿನಾಂಕ: 16–07–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

*ನಿರ್ಣಯ:–* **ದೃಢೀಕರಿಸಲಾಯಿತು.**

ದಿನಾಂಕ: 04–06–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ.

**ಐಟಂ ಸಂಖ್ಯೆ:24ರ** ಕುರಿತು ಶ್ರೀ.ಆರ್.ಬಿ.ಭಾವಿಕಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯ ವರದಿಯನ್ನು ಮಾನ್ಯ ಕುಲಸಚಿವರು ಸದಸ್ಯರ ಗಮನಕ್ಕೆ ತಂದರು. ಅದರ ಮುಖ್ಯಾಂಶಗಳು.

1. ದಿನಾಂಕ:4–8–2016ರ ಬೆಳಿಗ್ಗೆ 11 ಘಂಟೆಗೆ ಜರುಗಿದ ಸಭೆಯಲ್ಲಿ ಆರ್ಥಿಕ ವಿಭಾಗದಿಂದ ರೂ.32,000/– ದಂಡ ಪಾವತಿಸಿದ್ದರ ಕುರಿತು ಚರ್ಚಿಸಲಾಗಿ ಆರ್ಥಿಕ ಅಧಿಕಾರಿಗಳು ದಂಡ ಪಾವತಿಸುವ ಮುಂಚೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯದೇ ಪಾವತಿಸಿರುವದು ಕಂಡು ಬಂದಿರುತ್ತದೆ.

2. ಸಮಿತಿ ಸದಸ್ಯರು ಇನ್ನು ಮುಂದೆ ಹಣಕಾಸು ವಿಷಯದಲ್ಲಿ ಸಮಸ್ಯೆಯಾದಲ್ಲಿ ಮಾನ್ಯ ಕುಲಪತಿಗಳ ಆದ್ಯ ಗಮನಕ್ಕೆ ತರುವದು ಮತ್ತು ಅನುಮೋದನೆ ಪಡೆಯುವುದು.
3. ಈ ಹಿಂದೆ ಇಂಥ ಕೆಲವು ತಪ್ಪಾಗಿರುವುದು ಹೊರನೋಟಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ ಇನ್ನು ಮುಂದೆ ಇಂಥ ತಪ್ಪುಗಳು ಆಗದ ಹಾಗೇ ಕ್ರಮಕೈಗೊಳ್ಳಲು ಹಿಂದಿನ ಆರ್ಥಿಕ ಅಧಿಕಾರಿಗಳಾದ ಡಾ.ಸಂಜೀವಕುಮಾರ ಅವರಿಗೆ ಸಮಿತಿ ಸದಸ್ಯರು ಸೂಚಿಸಿದರು.
4. ಸದ್ಯಕ್ಕೆ ಪಾವತಿಸಿದ ದಂಡವು ವಿಶ್ವವಿದ್ಯಾನಿಲಯದಿಂದ ಭರಿಸಿರುವದು ಸೂಕ್ತ ಎಂದು ಸಭೆಯು ನಿರ್ಣಯಿಸಿತು.

ವರದಿಯಲ್ಲಿ ರೂ.32,000/- ವನ್ನು ಭರಿಸಿರುವುದನ್ನು ಒಪ್ಪಿಕೊಂಡು ಇನ್ನು ಮುಂದೆ ತಪ್ಪು ಮಾಡಿದಲ್ಲಿ ಆರ್ಥಿಕ ಅಧಿಕಾರಿಗಳೇ ಹೊಣೆಗಾರರಾಗಬೇಕಾಗುತ್ತದೆ ಎಂದು ನಿರ್ಣಯಿಸಿರುವುದನ್ನು ಸಭೆ ಒಪ್ಪಿಕೊಂಡಿತು.

ಇದೇ ಸಂದರ್ಭದಲ್ಲಿ ಡಾ.ಸಂಜೀವಕುಮಾರ ಅವರು ಸಕಾಲದಲ್ಲಿ ತೆರಿಗೆಯನ್ನು ಪಾವತಿ ಮಾಡದಿರುವುದು ಒಂದು ಬಾರಿ ಮಾತ್ರ ಅಲ್ಲ; ಅವರ ಅವಧಿಯಲ್ಲಿ ಅನಂತರವೂ ಈ ಬಗೆಯ ಕರ್ತವ್ಯದಲ್ಲಿ ಚ್ಯುತಿ ಹಲವು ಬಾರಿ ಆಗಿವೆ. ಹೀಗೆ ಕರ್ತವ್ಯ ಲೋಪದಿಂದಾಗಿ ಮತ್ತೆ ವಿಶ್ವವಿದ್ಯಾನಿಲಯವು ದಂಡ ತೆರಬೇಕಾಗಿ ಬಂದಲ್ಲಿ ಏನು ಕ್ರಮಕೈಗೊಳ್ಳುವುದು ಎಂದು ಸದಸ್ಯರು ನಿರ್ಧರಿಸಬೇಕು ಎಂಬುದಾಗಿ ಕುಲಪತಿಯವರು ಹೇಳಿದರು. ಡಾ.ಸಂಜೀವಕುಮಾರ್ ಅವರ ಅವಧಿಯ ತಪ್ಪುಗಳಿಂದ ಮುಂದಿನ ಅವಧಿಯ ಹಣಕಾಸಿನ ಅಧಿಕಾರಿಗಳ ಅವಧಿಯಲ್ಲಿ ದಂಡ ತೆರಬೇಕಾಗಿದೆ. ಇದನ್ನೂ ಮಾನ್ಯ ಸದಸ್ಯರೆಲ್ಲರೂ ಗಮನಿಸಬೇಕು ಎಂದರು.

***ನಿರ್ಣಯ:-***

**1) ಡಾ.ಸಂಜೀವಕುಮಾರ್ ಅವರ ಇಂಥ ಕರ್ತವ್ಯ ಲೋಪದ ಮಾಹಿತಿ ತನಿಖಾ ಸಮಿತಿಗೆ ಗೊತ್ತಿರಲಿಲ್ಲ. ಹಾಗಾಗಿ ಒಂದು ಪ್ರಕರಣ ಇಟ್ಟುಕೊಂಡು ವಿನಾಯಿತಿ ನೀಡಲಾಗಿತ್ತು. ಅನಂತರದಲ್ಲಿ ವಿಳಂಬ ನೀತಿಯ ಕಾರಣಕ್ಕೆ ದಂಡವನ್ನು ಕಟ್ಟಬೇಕಾದಲ್ಲಿ ಹಿಂದಿನ ಹಣಕಾಸಿನ ಅಧಿಕಾರಿಯವರಿಂದಲೇ ಭರಿಸತಕ್ಕದ್ದು ಎಂದು ಸಭೆಯು ನಿರ್ಣಯಿಸಿತು.**

**2) ಇನ್ನು ಉಳಿದ ವಿಷಯಗಳ ಬಗ್ಗೆ ಒಪ್ಪಿಕೊಳ್ಳಲಾಯಿತು.**

**<u>ದಿನಾಂಕ:16-07-2016ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 01/92*

ವಿಷಯ:-ಶ್ರೀ ಅಮರದೀಪ ಬಿದರಿ, ತಾಂತ್ರಿಕ ಸಹಾಯಕರು ಹಾಗೂ
ಶ್ರೀ.ಮೆಹಬೂಬ.ಎಸ್.ಪಟೇಲ, ಕಿರಿಯ ತಾಂತ್ರಿಕ ಸಹಾಯಕರು, ಐ.ಸಿ.ಟಿ ವಿಭಾಗ
ಇವರ ವೇತನ ಹೆಚ್ಚಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಅಮರದೀಪ ಬಿದರಿ, ತಾಂತ್ರಿಕ ಸಹಾಯಕರು ಹಾಗೂ ಶ್ರೀ.ಮಹಬೂಬ.ಎಸ್.ಪಟೇಲ ಕಿರಿಯ ತಾಂತ್ರಿಕ ಸಹಾಯಕರು, ಐ.ಸಿ.ಟಿ ವಿಭಾಗ ಇವರು ವೇತನ ಹೆಚ್ಚಿಸಲು ಕೋರಿ ಪತ್ರ ಸಲ್ಲಿಸಿದ್ದು, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅವರ ವಿದ್ಯಾರ್ಹತೆಯ ವಿವರಗಳನ್ನು ಒದಗಿಸಲು ಹೇಳಿತ್ತು. ಈ ವಿಷಯವನ್ನು ಮಾಹಿತಿಯೊಂದಿಗೆ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:-**ಶ್ರೀ ಅಮರದೀಪ ಬಿದರಿ, ತಾಂತ್ರಿಕ ಸಹಾಯಕರು ಇವರಿಗೆ ರೂ.22,000/- ಹಾಗೂ ಶ್ರೀ.ಮಹಬೂಬ.ಎಸ್.ಪಟೇಲ ಕಿರಿಯ ತಾಂತ್ರಿಕ ಸಹಾಯಕರು, ಇವರಿಗೆ ರೂ.18,000/- ವೇತನವನ್ನು ಹೆಚ್ಚಿಸಲಾಯಿತು. ಹಾಗೂ ಐ.ಸಿ.ಟಿ ವಿಭಾಗಕ್ಕೆ ಇನ್ನು ನಾಲ್ಕು ಸಿಬ್ಬಂದಿಗಳ ಅವಶ್ಯಕತೆ ಇದೆ. ಆ ನೇಮಕಾತಿಯನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು ಎಂದು ಸಭೆಗೆ ಮಾನ್ಯ ಕುಲಸಚಿವರು ತಿಳಿಸಿದರು.**

## ಸಿಂಡಿಕೇಟ್ ಐಟಂ ಸಂಖ್ಯೆ :02/92

**ವಿಷಯ:–** ಡಾ.ಹೇಮಲತಾ.ಎಚ್.ಎಂ ಅವರನ್ನು ಸ್ನಾತಕೋತ್ತರ ಕೇಂದ್ರ, ಮಂಡ್ಯ ಇಲ್ಲಿಗೆ 2016–17ನೇ ಶೈಕ್ಷಣಿಕ ವರ್ಷಕ್ಕೆ ನಿಯೋಜಿಸುವ ಕುರಿತು.

ಡಾ.ಹೇಮಲತಾ.ಎಚ್.ಎಂ ಅವರನ್ನು ಅವರನ್ನು ಸ್ನಾತಕೋತ್ತರ ಕೇಂದ್ರ ಮಂಡ್ಯಕ್ಕೆ 2016–17ನೇ ಶೈಕ್ಷಣಿಕ ವರ್ಷಕ್ಕೆ ನಿಯೋಜಿಸುವ ಕುರಿತಂತೆ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು ವಿಷಯವನ್ನು ಮುಂದೂಡಲಾಗಿತ್ತು. ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಸ್ತುತ ಐದು ವಿಭಾಗಗಳಿದ್ದು, ಎಲ್ಲ ವಿಭಾಗದ(ಶಿಸ್ತಿನ) ವಿದ್ಯಾರ್ಥಿಗಳು ಮಹಿಳಾ ಅಧ್ಯಯನ ವಿಷಯವನ್ನು ಕಡ್ಡಾಯ ಪತ್ರಿಕೆಯಾಗಿ ಓದುತ್ತಿದ್ದಾರೆ. ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿದರೆ ಜನಾಭಿಪ್ರಾಯ ಸ್ನಾತಕೋತ್ತರ ಕೇಂದ್ರದ ಪರವಾಗಿ ಇರುವುದಿಲ್ಲ. ಇದನ್ನು ಹಿರಿಯ ಮತ್ತು ಖಾಯಂ ನೆಲೆಯ ಅಧ್ಯಾಪಕರಿಂದ ನಡೆಸುವುದು ಸೂಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಡಾ.ಹೇಮಲತಾ ಅವರನ್ನು ಮಂಡ್ಯದ ಸ್ನಾತಕೋತ್ತರ ಕೇಂದ್ರಕ್ಕೆ ನಿಯೋಜಿಸುವುದು ಸೂಕ್ತವಾಗಿರುವದರಿಂದ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಪುನ: ಮಂಡಿಸಿದೆ.

**ನಿರ್ಣಯ:– ಡಾ.ಹೇಮಲತಾ ಅವರನ್ನು ಮಂಡ್ಯದ ಸ್ನಾತಕೋತ್ತರ ಕೇಂದ್ರಕ್ಕೆ ನಿಯೋಜಿಸಲು ಅನುಮೋದಿಸಲಾಯಿತು.**

## ಹೊಸ ವಿಷಯಗಳು

## ಸಿಂಡಿಕೇಟ್ ಐಟಂ ಸಂಖ್ಯೆ:03/93

ವಿಷಯ:2016–17ನೇ ಸಾಲಿಗೆ ರಾಷ್ಟ್ರೀಯ ಮಹಿಳಾ ಮಹಾವಿದ್ಯಾಲಯ, ಲಿಂಗಸಗೂರು ಇದಕ್ಕೆ ಮುಂದುವರಿಕೆ ಸಂಯೋಜನೆ ಮಂಜೂರಾತಿ ಕುರಿತು.

ಉಲ್ಲೇಖ:1) ವಿದ್ಯಾವಿಷಯಕ್ ಪರಿಷತ್‌ನಗೊತ್ತುವಳಿ ಸಂಖ್ಯೆ:(3)ದಿನಾಂಕ:03–03–2016.
2) ಸಿಂಡಿಕೇಟ್ ಗೊತ್ತುವಳಿ ಸಂಖ್ಯೆ:(8) ದಿನಾಂಕ:03–03–2016.
3) ಸ್ಥಾನಿಕ ವಿಚಾರಣಾ ಸಮಿತಿ ವರದಿ ದಿನಾಂಕ:20–07–2016.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(1) ಮತ್ತು (2)ರ ಸಭೆಗಳಲ್ಲಿ ರಾಷ್ಟ್ರೀಯ ಮಹಿಳಾ ಮಹಾವಿದ್ಯಾಲಯ, ಲಿಂಗಸಗೂರು ಇದಕ್ಕೆ 2016–17ನೇ ಶೈಕ್ಷಣಿಕ ಸಾಲಿಗೆ ಮುಂದುವರಿಕೆ ಸಂಯೋಜನೆಗೆ ಮರು ತಪಾಸಣೆ ಮಾಡಲು ತೀರ್ಮಾನಿಸಲಾಗಿರುತ್ತದೆ. ಇದರಂತೆ ದಿನಾಂಕ:20–07–2016ರಂದು ಸದರಿ ಕಾಲೇಜಿಗೆ ಸ್ಥಾನಿಕ ವಿಚಾರಣಾ ಸಮಿತಿಯು ಭೇಟಿ ನೀಡಿ ಮುಂದುವರಿಕೆ ಸಂಯೋಜನೆಗೆ ಶಿಫಾರಸ್ಸು ಮಾಡಿರುತ್ತದೆ. ಸದರಿ ವರದಿಯನ್ನು ದಿನಾಂಕ:08–08–2016ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಅನುಮೋದಿಸಲಾಯಿತು. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:– ಅನುಮೋದಿಸಲಾಯಿತು.*

## ಸಿಂಡಿಕೇಟ್ ಐಟಂ ಸಂಖ್ಯೆ: 04/93

ವಿಷಯ: ಬಸಮ್ಮ ಮೆಮೋರಿಯಲ್ ಮಹಿಳಾ ವಾಣಿಜ್ಯ ಮಹಾವಿದ್ಯಾಲಯ ಹೊಸಪೇಟೆ ಇದರ ಬೇರೆ ಸ್ಥಾನಕ್ಕೆ ವರ್ಗಾವಣೆಗೆ ಅನುಮತಿ ಕುರಿತು.

ಉಲ್ಲೇಖ:1) ಕಾರ್ಯದರ್ಶಿ ಇವರ ಪತ್ರ ದಿನಾಂಕ:12–05–2016.
2)ಸ್ಥಾನಿಕ ವಿಚಾರಣಾ ಸಮಿತಿ ವರದಿ ದಿನಾಂಕ:20–07–2016.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸದರಿ ಕಾಲೇಜಿನ ಕಾರ್ಯದರ್ಶಿ ಉಲ್ಲೇಖಿತ(1)ರ ಪತ್ರದ ಮೂಲಕ ಬಸಮ್ಮ ಮೆಮೋರಿಯಲ್ ಮಹಿಳಾ ವಾಣಿಜ್ಯ ಮಹಾವಿದ್ಯಾಲಯ ಹೊಸಪೇಟೆ ಇದನ್ನು ಬೇರೆ ಕಟ್ಟಡಕ್ಕೆ ವರ್ಗಾವಣೆಗೆ ಮಾಡಿದ್ದು, ಇದಕ್ಕೆ ಅನುಮತಿ ನೀಡಲು ವಿನಂತಿಸಿರುತ್ತಾರೆ. ದಿನಾಂಕ:20-07-2016ರಂದು ಸ್ಥಾನಿಕ ವಿಚಾರಣಾ ಸಮಿತಿಯು ಭೇಟಿ ನೀಡಿ ವರ್ಗಾವಣೆ ಮಾಡಿದ ಕಟ್ಟಡಕ್ಕೆ ತಪಾಸಣೆ ಮಾಡಿ ಶಿಫಾರಸ್ಸಿನೊಂದಿಗೆ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯನ್ನು ದಿನಾಂಕ:08-08-2016ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಅನುಮೋದಿಸಲಾಯಿತು. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| ಮೊದಲು ಕಾಲೇಜು ಇದ್ದ ಕಟ್ಟಡದ ವಿಳಾಸ | ವರ್ಗಾವಣೆ ಮಾಡಿದ ಕಟ್ಟಡದ ವಿಳಾಸ |
|---|---|
| ಬಸಮ್ಮ ಮೆಮೋರಿಯಲ್ ಮಹಿಳಾ ವಾಣಿಜ್ಯ ಮಹಾವಿದ್ಯಾಲಯ, 1st Floor,Maruti Driving School, Near APMC 2nd gate, T.B Dam Road, ಹೊಸಪೇಟೆ - 583201(ಜಿಲ್ಲೆ: ಬಳ್ಳಾರಿ) | ಬಸಮ್ಮ ಮೆಮೋರಿಯಲ್ ಮಹಿಳಾ ವಾಣಿಜ್ಯ ಮಹಾವಿದ್ಯಾಲಯ, 3ನೇ ಮಹಡಿ ಆರ್ಯ ಸೂಪರ ಮಾರ್ಕೆಟ್ ಮೇಲ್ಗಡೆ, ಎಸ್.ಎಂ.ಎಸ್.ಕೆ, ಪ್ಲಾಜಾ ಅಂಬೇಡ್ಕರ ಸರ್ಕಲ್ ಹತ್ತಿರ, ಹೊಸಪೇಟೆ-583201 |

***ನಿರ್ಣಯ:-*** ***ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ:05/93*

**ವಿಷಯ:** ಸಿಂಧನೂರಿನಲ್ಲಿ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸುವ ಹಾಗೂ ಮೂಲಭೂತ ಸೌಕರ್ಯಗಳ ಪರಿಶೀಲನಾ ವರದಿ.

**ಉಲ್ಲೇಖ:** ಅಧಿಸೂಚನೆ ಸಂಖ್ಯೆ: KSWU/Const.VC/2016-17/1210 ದಿ:26-7-2016.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸಿಂಧನೂರಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಲು ಹಾಗೂ ಮೂಲಭೂತ ಸೌಕರ್ಯಗಳ ಕುರಿತು ಪರಿಶೀಲನೆಗಾಗಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ:29-7-2016ರಂದು ಸಿಂಧನೂರಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳ ಕುರಿತು ಪರಿಶೀಲನೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:-*** ***ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ: 06/93*

**ವಿಷಯ:** 2017-18 ನೇ ಶೈಕ್ಷಣಿಕ ಸಾಲಿಗೆ ಹೊಸ ಕಾಲೇಜ/ಕೋರ್ಸ-ವಿಷಯ/ಶಾಶ್ವತ/ಶಾಶ್ವತ ನವೀಕರಣ/ಮುಂದುವರಿಕೆ ಹಾಗೂ ಸ್ನಾತಕೋತ್ತರ ಕೋರ್ಸಿಗೆ ಸಂಯೋಜನೆ ಅಧಿಸೂಚನೆ ಹೊರಡಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ 2017-18 ನೇ ಶೈಕ್ಷಣಿಕ ಸಾಲಿಗಾಗಿ ಸಂಯೋಜನಾ ಶುಲ್ಕವನ್ನು ನಿಗದಿಪಡಿಸಿ ಸಂಯೋಜನಾ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ. ಆದ್ದರಿಂದ ಸಂಯೋಜನೆ ಶುಲ್ಕವನ್ನು ನಿಗದಿಪಡಿಸುವ ಕುರಿತು ದಿನಾಂಕ : 04-09-2013 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ಐಟಂ ಸಂಖ್ಯೆ 02 ರನ್ವಯ ಶೇಕಡಾ 10% ರಷ್ಟು ಹೆಚ್ಚಿಸಿ ಮುಂದಿನ ಸಮ ಸಂಖ್ಯೆ ಮಾಡಿಕೊಳ್ಳುವದೊಂದಿಗೆ ಪ್ರಸ್ತಾವನೆ ಒಪ್ಪಿಕೊಳ್ಳಲಾಗಿತ್ತು, ಆದರೆ 2016-17 ನೇ ಶೈಕ್ಷಣಿಕ ಸಾಲಿಗೆ ದಿನಾಂಕ: 13-10-2014 ರಂದ ಸಿಂಡಿಕೇಟ್ ಸಾಮಾನ್ಯ ಸಭೆಯ ಐಟಂ ಸಂಖ್ಯೆ 22 ರನ್ವಯ ಯಾವುದೆ ಶುಲ್ಕದಲ್ಲಿ ಶೇಕಡಾ

10% ರಷ್ಟು ಬದಲಾವಣೆ ಮಾಡಿರುವುದಿಲ್ಲ, ಆದ್ದರಿಂದ 2017–18 ನೇ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆ ಶುಲ್ಕದ ಕುರಿತು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

***ನಿರ್ಣಯ:–** **2017–18 ನೇ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆ ಶುಲ್ಕವನ್ನು ಶೇಕಡಾ 10% ರಷ್ಟು ಹೆಚ್ಚಿಸಲು ತೀರ್ಮಾನಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ: 07/93*

ವಿಷಯ : ಶಿವಶರಣೆ ಅಕ್ಕಮಹಾದೇವಿ ಅಧ್ಯಯನ ಕೇಂದ್ರ ಉಡುತಡಿಗೆ ವಿಶೇಷಾಧಿಕಾರಿಗಳ ನೇಮಕ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು ಶಿವಶರಣೆ ಅಕ್ಕಮಹಾದೇವಿ ಅಧ್ಯಯನ ಕೇಂದ್ರವನ್ನು ಉಡುತಡಿ (ಶಿವಮೊಗ್ಗ ಜಿಲ್ಲೆ) ಯಲ್ಲಿ ಸ್ಥಾಪಿಸಲಾಗುತ್ತಿದ್ದು ಈ ಕುರಿತಂತೆ ಅಲ್ಲಿಯ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ಜರುಗಿಸುವ ಸಲುವಾಗಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ. ವಿಜಯಾ. ಎಸ್. ಎಸ್. ಅವರನ್ನು ವಿಶೇಷಾಧಿಕಾರಿಗಳನ್ನಾಗಿ ದಿನಾಂಕ:12–08–2016 ರ ಕಛೇರಿ ಆದೇಶ ಸಂಖ್ಯೆ : KSWU/ADM/2016-17/1400 ರ ಆದೇಶದ ಪ್ರಕಾರ ನೇಮಕ ಮಾಡಲಾಗಿರುತ್ತದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

***ನಿರ್ಣಯ:–** **ಘಟನೋತ್ತರ ಅನುಮೋದನೆ ನೀಡಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ: 08/93*

ವಿಷಯ : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಂಡ್ಯದ ಹೊರಾವರಣ ಕೇಂದ್ರಕ್ಕೆ ಸಹಾಯಕ ಪ್ರಾಧ್ಯಾಪಕರನ್ನು ನಿಯೋಜಿಸಿದ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಹೊರಾವರಣ ಕೇಂದ್ರವು ಬಿ. ಹೊಸೂರ ಮಂಡ್ಯದಲ್ಲಿ ಈಗಾಗಲೇ ಪ್ರಾರಂಭಿಸಲಾಗಿದ್ದು ಅಲ್ಲಿ ಐದು ವಿಭಾಗಗಳನ್ನು ನಡೆಸಲಾಗುತ್ತಿದೆ. ಅಲ್ಲಿಯ ಇಂಗ್ಲೀಷ್ ಅಧ್ಯಯನ ವಿಭಾಗದಲ್ಲಿ ಖಾಯಂ ಬೋಧಕ ಸಿಬ್ಬಂದಿಗಳು ಇರದೇ ಇದ್ದ ಕಾರಣ, ವಿಶ್ವವಿದ್ಯಾಲಯದ ವಿಜಯಪುರದ ಇಂಗ್ಲೀಷ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ. ದೀಪಕ ಸಿಂಧೆ ಇವರನ್ನು ದಿ:29–08–2016 ರಿಂದ ಒಂದು ವರ್ಷದ ಅವಧಿಗೆ ನಿಯೋಜಿಸಲಾಗಿರುತ್ತದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

***ನಿರ್ಣಯ:–** **ಘಟನೋತ್ತರ ಅನುಮೋದನೆ ನೀಡಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ: 09/93*

ವಿಷಯ : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಂಡ್ಯದ ಹೊರಾವರಣ ಕೇಂದ್ರಕ್ಕೆ ವಿಶೇಷಾಧಿಕಾರಿಗಳ ನೇಮಕ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಹೊರಾವರಣ ಕೇಂದ್ರವು ಬಿ. ಹೊಸೂರ ಮಂಡ್ಯದಲ್ಲಿ ಈಗಾಗಲೇ ಪ್ರಾರಂಭಿಸಲಾಗಿದ್ದು ಅಲ್ಲಿ ಐದು ವಿಭಾಗಗಳನ್ನು ನಡೆಸಲಾಗುತ್ತಿದೆ. ಅಲ್ಲಿಯ ಎಲ್ಲ ಕಾರ್ಯ ಚಟುವಟಿಕೆಗಳನ್ನು ಸುಗಮವಾಗಿ ನಡೆಸುವ ದೃಷ್ಟಿಯಿಂದ ವಿಶೇಷಾಧಿಕಾರಿಗಳನ್ನು ನೇಮಕ ಮಾಡುವ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ನುರಿತ ಪ್ರಾಧ್ಯಾಪಕರಾದ ಪ್ರೊ ವಿಜಯಶ್ರೀ ಸಬರದ ಇವರನ್ನು ಕಛೇರಿಯ ಆದೇಶ ಸಂಖ್ಯೆ: KSWU/ADM/2015-16/1380 ದಿನಾಂಕ: 10–08–2016 ರ ಆದೇಶ ಪ್ರಕಾರ ವಿಶೇಷಾಧಿಕಾರಿ(ಶೈಕ್ಷಣಿಕ)

ಗಳನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

*ನಿರ್ಣಯ:– ಘಟನೋತ್ತರ ಅನುಮೋದನೆ ನೀಡಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ: 10/93*

ವಿಷಯ : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಂಡ್ಯದ ಹೊರಾವರಣ ಕೇಂದ್ರಕ್ಕೆ ವಿಶೇಷಾಧಿಕಾರಿಗಳ ನೇಮಕ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಹೊರಾವರಣ ಕೇಂದ್ರವು ಬಿ. ಹೊಸೂರ ಮಂಡ್ಯದಲ್ಲಿ ಈಗಾಗಲೇ ಪ್ರಾರಂಭಿಸಲಾಗಿದ್ದು ಅಲ್ಲಿ ಐದು ವಿಭಾಗಗಳನ್ನು ನಡೆಸಲಾಗುತ್ತಿದೆ. ಅಲ್ಲಿಯ ಎಲ್ಲ ಕಾರ್ಯ ಚಟುವಟಿಕೆಗಳನ್ನು ಸುಗಮವಾಗಿ ನಡೆಸುವ ದೃಷ್ಟಿಯಿಂದ ಪ್ರೊ ಎನ್.ಚಂದ್ರಪ್ಪ ಇವರನ್ನು ಪ್ರಾದೇಶಿಕ ನಿರ್ದೇಶಕರು ಎಂದು ನೇಮಕ ಮಾಡಲಾಗಿತ್ತು. ಮಂಡ್ಯದ ಹೊರಾವರಣದ ಅಭಿವೃದ್ಧಿ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ವೇಗವಾಗಿ ಮುನ್ನಡೆಸಲು ವಿಶೇಷಾಧಿಕಾರಿಗಳ ಅವಶ್ಯಕತೆ ಇದ್ದು, ಈ ಹಿನ್ನೆಲೆಯಲ್ಲಿ ನುರಿತ ಪ್ರಾಧ್ಯಾಪಕರಾದ ಪ್ರೊ ವಿಜಯಶ್ರೀ ಸಬರದ ಇವರನ್ನು ಕಛೇರಿಯ ಆದೇಶ ಸಂಖ್ಯೆ: KSWU/ADM/2015-16/1380 ದಿನಾಂಕ: 10–08–2016 ರ ಆದೇಶ ಪ್ರಕಾರ ವಿಶೇಷಾಧಿಕಾರಿಗಳನ್ನಾಗಿ(ಶೈಕ್ಷಣಿಕ) ಒಂದು ವರ್ಷದ ವರೆಗೆ ನೇಮಕ ಮಾಡಿ ಆದೇಶ ಹೊರಡಿಸಿದೆ. ಹಾಗೂ ಪ್ರೊ ಎನ್.ಚಂದ್ರಪ್ಪ ಇವರನ್ನು ವಿಶೇಷಾಧಿಕಾರಿ(ಅಭಿವೃದ್ಧಿ) ಎಂದು ಮೂರು ತಿಂಗಳ ಅವಧಿಗೆ ಆದೇಶಿಸಿದ್ದು, ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

*ನಿರ್ಣಯ:– ಘಟನೋತ್ತರ ಅನುಮೋದನೆ ನೀಡಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ: 11/93*

ವಿಷಯ : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಸಿಂಧನೂರಕ್ಕೆ ವಿಶೇಷಾಧಿಕಾರಿಗಳ ನೇಮಕ ಮಾಡಿದ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಸಿಂಧನೂರನಲ್ಲಿ ಈಗಾಗಲೇ ಪ್ರಾರಂಭಿಸಲಾಗಿದ್ದು ಅಲ್ಲಿ ನಾಲ್ಕು ವಿಭಾಗಗಳನ್ನು ನಡೆಸಲಾಗುತ್ತಿದೆ. ಅಲ್ಲಿಯ ಎಲ್ಲ ಕಾರ್ಯ ಚಟುವಟಿಕೆಗಳನ್ನು ಸುಗಮವಾಗಿ ನಡೆಸುವ ದೃಷ್ಟಿಯಿಂದ ವಿಶೇಷಾಧಿಕಾರಿಗಳನ್ನು ನೇಮಕ ಮಾಡುವ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ನುರಿತ ಒಬ್ಬ ಬೋಧಕ ಸಿಬ್ಬಂದಿಯಾದ ಡಾ. ರಮೇಶ ಕೆ ಸಹಪ್ರಾಧ್ಯಾಪಕರು, ಗಣಕ ಅಧ್ಯಯನ ವಿಭಾಗ ಇವರನ್ನು ಕಛೇರಿಯ ಆದೇಶ ಸಂಖ್ಯೆ: KSWU/ADM/2016-17/ ದಿನಾಂಕ: 25–08–2016 ರ ಆದೇಶದ ಪ್ರಕಾರ ವಿಶೇಷಾಧಿಕಾರಿಗಳನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

*ನಿರ್ಣಯ:– ಘಟನೋತ್ತರ ಅನುಮೋದನೆ ನೀಡಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ:12/93*

ವಿಷಯ : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿಜಯಪುರದಲ್ಲಿ ಶ್ರೀ ಬಸವರಾಜ. ಪಾಟೀಲ. ಕಾರ್ಯನಿರ್ವಾಹಕ ಅಭಿಯಂತರರನ್ನು ನಿಯೋಜನೆ ಮೇಲೆ ಸೇವೆ ಪಡೆಯುವ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರನಲ್ಲಿ ಎಲ್ಲಾ ಕಟ್ಟಡ/ಕಾಮಗಾರಿಗಳ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ನಡೆಸುವ ದೃಷ್ಟಿಯಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಸೇವೆಯನ್ನು ನಿಯೋಜನೆಯ ಮೇಲೆ ಶ್ರೀ. ಆರ್. ಶರಣಪ್ಪಗೌಡ ರವರ ಸೇವೆಯನ್ನು ಪಡೆಯಲಾಗುತ್ತಿತ್ತು. ಸರ್ಕಾರದ ಆದೇಶ ಸಂಖ್ಯೆ:ಸನೀಇ 54 ಸೇಸಎ 2016 ದಿನಾಂಕ:27-07-2016ರ ಪ್ರಕಾರ ಇವರನ್ನು ನಿಯೋಜನೆ ಸೇವೆಯಿಂದ ಕಛೇರಿ ಆದೇಶ ಸಂಖ್ಯೆ : ಕರಾಮವಿವಿ/ಆಡಳಿತ/ ಸಿಬ್ಬಂದಿ/2016-17/1315 ದಿನಾಂಕ : 03-08-2016 ರಂದು ಬಿಡುಗಡೆಗೊಳಿಸಲಾಗಿರುತ್ತದೆ. ಅವರ ಸ್ಥಾನದಲ್ಲಿ ಶ್ರೀ. ಬಸವರಾಜ ಪಾಟೀಲ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇವರನ್ನು ನಿಯೋಜನೆ ಮೇಲೆ ದಿನಾಂಕ:12-08-2016 ರ ರಿಂದ ಸೇವೆ ಪಡೆಯಲಾಗುತ್ತಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

***ನಿರ್ಣಯ:-** ಘಟನೋತ್ತರ ಅನುಮೋದನೆ ನೀಡಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ: 13/93*

**ವಿಷಯ** : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿಜಯಪುರದ ಬೆಂಗಳೂರಿನ ಕಾರ್ಯಚಟುವಟಿಕೆಗಳ ಸಲುವಾಗಿ ಸಂಪರ್ಕಾಧಿಕಾರಿಯ ನೇಮಕ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರದ ಬೆಂಗಳೂರಿನಲ್ಲಿಯ ಕಾರ್ಯಚಟುವಟಿಕೆಗಳನ್ನು ತುರ್ತಾಗಿ ಮಾಡಲು ಒಬ್ಬ ಸಂಪರ್ಕಾಧಿಕಾರಿಯ ನೇಮಕ ಮಾಡುವದು ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಬೆಂಗಳೂರಿನ ಕೆಲಸಕಾರ್ಯಗಳು ಸುಗಮವಾಗಿ ಮತ್ತು ತುರ್ತಾಗಿ ಕ್ರಮಕೈಕೊಳ್ಳಲು ಶ್ರೀ. ಎಸ್. ಎನ್. ದೀಪಕ ಬೆಂಗಳೂರು ಇವರನ್ನು ಕಛೇರಿ ಆದೇಶ ಸಂಖ್ಯೆ : KSWU/ADM/LO/2016-17/ 1401 ದಿ: 12-08-2016 ರ ಪ್ರಕಾರ ಸಂಪರ್ಕಾಧಿಕಾರಿಯನ್ನಾಗಿ ಪ್ರತಿ ಮಾಹೆಗೆ ರೂ. 15,000/- (ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ನಿಗದಿಪಡಿಸಿ ನೇಮಕ ಮಾಡಲಾಗಿರುತ್ತದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

***ನಿರ್ಣಯ:-** ಘಟನೋತ್ತರ ಅನುಮೋದನೆ ನೀಡಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ: 14/93*

**ವಿಷಯ** : ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿಜಯಪುರದ ಕಟ್ಟಡ ಕಾಮಗಾರಿಗಳ ಕೆಲಸ ಮತ್ತು ವಿದ್ಯುತ್‌ಚ್ಛಕ್ತಿಗಳ ಕೆಲಸಗಳ ಮೇಲ್ವಿಚಾರಣೆ ಮಾಡಲು ತಾತ್ಕಾಲಿಕ ಆಧಾರದ ಮೇಲೆ ಸಹಾಯಕ ಅಭಿಯಂತರರನ್ನು/ ಕಿರಿಯ ಅಭಿಯಂತರರನ್ನು ನೇಮಕ ಮಾಡಿದ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರದಲ್ಲಿ ಕಟ್ಟಡ ಕಾಮಗಾರಿಗಳ ಕೆಲಸ ಮತ್ತು ವಿದ್ಯುತ್‌ಚ್ಛಕ್ತಿಗಳ ಕೆಲಸಗಳ ಮೇಲ್ವಿಚಾರಣೆ ಮಾಡಲು ಸಹಾಯಕ ಅಭಿಯಂತರರನ್ನು/ಕಿರಿಯ ಅಭಿಯಂತರರ ಅವಶ್ಯಕತೆ ಇದ್ದ ಕಾರಣ ದಿನಾಂಕ: 08-08-2016 ರಂದು ಪತ್ರಿಕಾ ಪ್ರಕಟಣೆ ಹೊರಡಿಸಿ, ಅರ್ಹತೆ ಮತ್ತು ಅನುಭವ ಇರುವ ಅಭ್ಯರ್ಥಿಗಳನ್ನು ತಾತ್ಕಾಲಿಕ ಆಧಾರದ ಮೇಲೆ ದಿನಾಂಕ :19-08-2016 ರನ್ವಯ ನೇಮಕ ಮಾಡಿ ಆದೇಶ ಹೊರಡಿಸಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

***ನಿರ್ಣಯ:-** ಘಟನೋತ್ತರ ಅನುಮೋದನೆ ನೀಡಲಾಯಿತು.*

## ***ಸಿಂಡಿಕೇಟ್ ಐಟಂ ಸಂಖ್ಯೆ: 15/93***

**ವಿಷಯ :** ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿಜಯಪುರದ ಭದ್ರತಾ ಅಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳುವ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರದಲ್ಲಿ, ವಿಶ್ವವಿದ್ಯಾಲಯದ ಆವರಣದ ಭದ್ರತಾ ಹಿತದೃಷ್ಠಿಯಿಂದ ತಾತ್ಕಾಲಿಕ ಆಧಾರದ ಮೇಲೆ ಭದ್ರತಾ ಅಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳಲು ದಿನಾಂಕ: 18-08-2016ರಂದು ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು. ಅದರಂತೆ ಅರ್ಹ ಮತ್ತು ಅನುಭವ ಇರುವ ಅಭ್ಯರ್ಥಿಯಾದ ಶ್ರೀ. ಫ್ರಾನ್ಸಿಸ್ ಗ್ಯಾಬ್ರಿಲ್ ಬ್ರಾಗಂಜ ಇವರನ್ನು ತಿಂಗಳಿಗೆ 15,000/- ಗೌರವಧನ ಮತ್ತು 2000/- ಇಂಧನ ವೆಚ್ಚ ನಿಗದಿಪಡಿಸಿ ನೇಮಕ ಮಾಡಲಾಗಿರುತ್ತದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

***ನಿರ್ಣಯ:-** ಘಟನೋತ್ತರ ಅನುಮೋದನೆ ನೀಡಲಾಯಿತು.*

## ***ಸಿಂಡಿಕೇಟ್ ಐಟಂ ಸಂಖ್ಯೆ : 16/93***

ವಿಷಯ: ಡಾ.ಎ.ಜಿ.ಹೇಮಂತಕುಮಾರ, ಸಹ-ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ ಇವರ ಮೇಲೆ ಇರುವ ಆರೋಪ ವಿಚಾರಣಾ ಸಮಿತಿಯ ವರದಿ.

***ನಿರ್ಣಯ:-** ವಿಚಾರಣಾ ಸಮಿತಿಯ ವರದಿಯನ್ನು ಪಾಲಿಸಲು ನಿರ್ಧರಿಸಲಾಯಿತು.*

## ***ಸಿಂಡಿಕೇಟ್ ಐಟಂ ಸಂಖ್ಯೆ : 17/93***

ವಿಷಯ: ಕನ್ನಡ ವಿಭಾಗದ ಮುಖ್ಯಸ್ಥರ ಬದಲಾವಣೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಪ್ರೊ.ವಿಜಯಶ್ರೀ ಸಬರದ ಅವರು ಮಂಡ್ಯ ಹೊರಾವರಣ ಕೇಂದ್ರಕ್ಕೆ ವಿಶೇಷಾಧಿಕಾರಿ (ಶೈಕ್ಷಣಿಕ)ಗಳಾಗಿ ನೇಮಕಗೊಂಡಿರುವ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಕನ್ನಡ ವಿಭಾಗದ ಮುಖ್ಯಸ್ಥರ ಸ್ಥಾನಕ್ಕೆ ಅದೇ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಮಹೇಶ ಐ ಚಿಂತಾಮಣಿ ಅವರನ್ನು ಕೆ.ಎಸ್.ಯು ಕಾಯ್ದೆ 2000 ಪ್ರಕರಣ 34(7)ರನ್ವಯ ಮುಂದಿನ ಎರಡು ವರ್ಷದ ಅಥವಾ ಮುಂದಿನ ಆದೇಶದವರೆಗೆ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಕ ಮಾಡಬೇಕಾಗಿದೆ. ಆದ್ದರಿಂದ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಇಡಲಾಗಿದೆ.

***ನಿರ್ಣಯ:-** ಪ್ರೊ.ಮಹೇಶ ಐ ಚಿಂತಾಮಣಿ ಅವರನ್ನು, ಕೆ.ಎಸ್.ಯು ಕಾಯ್ದೆ 2000* ಪ್ರಕರಣ *34(7)ರನ್ವಯ ಮುಂದಿನ ಎರಡು ವರ್ಷದ ಅಥವಾ ಮುಂದಿನ ಆದೇಶದವರೆಗೆ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಲು ತೀರ್ಮಾನಿಸಲಾಯಿತು.*

## ***ಸಿಂಡಿಕೇಟ್ ಐಟಂ ಸಂಖ್ಯೆ : 18/93***

ವಿಷಯ: ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡುವ ಕುರಿತು.

ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗದ ಪರಿನಿಯಮಾವಳಿಗಳಿಗೆ ದಿನಾಂಕ:25-11-2011ರಂದು ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆ ದೊರಕಿದ್ದು ಆಗಿನ ವ್ಯವಹಾರ ಅಧ್ಯಯನ ವಿಭಾಗದ ಮುಖ್ಯಸ್ಥರಿಗೆ ವಾಣಿಜ್ಯ ವಿಭಾಗದ ಕಾರ್ಯಭಾರವನ್ನು ನೀಡಲಾಗಿತ್ತು. ನಂತರದ ಅವಧಿಗಳಲ್ಲಿ ವಾಣಿಜ್ಯ ಮತ್ತು ವ್ಯವಹಾರ ಅಧ್ಯಯನ ವಿಭಾಗಗಳನ್ನು ಸಂಯುಕ್ತ ಎಂದು ಕರೆದು ಈ ಎರಡು ವಿಭಾಗಗಳಿಗೆ ಒಬ್ಬರನ್ನೇ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ. ವಾಣಿಜ್ಯ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ಚಟುವಟಿಕೆಗಳನ್ನು (ಎಂ.ಫಿಲ್ &

ಪಿಎಚ್.ಡಿ) ಪ್ರಾರಂಭಿಸಿದಾಗಿನಿಂದ ಕೆಲವು ತಾಂತ್ರಿಕ ಅಡಚಣೆಗಳು ಉಂಟಾಗಿ, ಆ ಪದವಿಗಳನ್ನು ನೀಡಲು ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆ ಪಡೆದ ವಾಣಿಜ್ಯ ಅಧ್ಯಯನ ವಿಭಾಗದ ಅಸ್ತಿತ್ವವನ್ನು ಉಳಿಸಬೇಕಾದ ಕಾರಣ, ವ್ಯವಹಾರ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಪ್ರೊ ಎಸ್.ಬಿ.ಕಾಮಶೆಟ್ಟಿ ಇವರನ್ನು ಕೆ.ಎಸ್.ಯು ಕಾಯ್ದೆ 2000 ಪ್ರಕರಣ 34(7)ರನ್ವಯ ಮುಂದಿನ ಎರಡು ವರ್ಷದ ಅಥವಾ ಮುಂದಿನ ಆದೇಶದವರೆಗೆ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಾಣಿಜ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಬೇಕಾಗಿದೆ. ಕಾರಣ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಇಡಲಾಗಿದೆ.

*ನಿರ್ಣಯ:-* **ಪ್ರೊ ಎಸ್.ಬಿ.ಕಾಮಶೆಟ್ಟಿ** *ಅವರನ್ನು ಕೆ.ಎಸ್.ಯು ಕಾಯ್ದೆ* ***2000*** **ಪ್ರಕರಣ 34(7)ರನ್ವಯ** *ಮುಂದಿನ ಎರಡು ವರ್ಷದ ಅಥವಾ ಮುಂದಿನ ಆದೇಶದವರೆಗೆ ವಾಣಿಜ್ಯ ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಲು ತೀರ್ಮಾನಿಸಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 19/93*

ವಿಷಯ: ಸ್ನಾತಕೋತ್ತರ ಹಿಂದಿ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡುವ ಕುರಿತು.

ಸ್ನಾತಕೋತ್ತರ ಹಿಂದಿ ಅಧ್ಯಯನ ವಿಭಾಗದ ಪರಿನಿಯಮಾವಳಿಗಳಿಗೆ ದಿನಾಂಕ:23-9-2008ರಂದು ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆ ದೊರಕಿದ್ದು, ಹಿಂದಿ ಅಧ್ಯಯನ ವಿಭಾಗವನ್ನು 2012ರಲ್ಲಿ ಪ್ರಾರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸದರಿ ವಿಭಾಗದ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದ, ಪ್ರೊ.ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು & ಡೀನರು ಅವರನ್ನು ಕೆ.ಎಸ್.ಯು ಕಾಯ್ದೆ 2000 ಪ್ರಕಾರ ಮುಂದಿನ ಎರಡು ವರ್ಷದ ಅಥವಾ ಮುಂದಿನ ಆದೇಶದವರೆಗೆ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಹಿಂದಿ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಬೇಕಾಗಿದೆ. ಕಾರಣ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಇಡಲಾಗಿದೆ.

*ನಿರ್ಣಯ:- ಅನುಮೋದಿಸಲಾಯಿತು*

## *ಸಿಂಡಿಕೇಟ್ ಐಟಂ ಸಂಖ್ಯೆ : 20/93*

ವಿಷಯ: ವಿಜಯಪುರ ನಗರದಲ್ಲಿರುವ ಹೋಟಲಗಳನ್ನು ಅತಿಥಿಗೃಹವಾಗಿ ಬಳಸುವ ಕುರಿತು.

ದಿನಾಂಕ:04-6-2016ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಶ್ರೀಮತಿ. ಉಮಾದೇವಿ ಕೆ ಕಾಕನೂರ ಇವರ ಎರಡು ಅಂತಸ್ತಿನ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಲು ಮಂಡಿಸಲಾಗಿತ್ತು. ಆದರೆ ವಾಸ್ತವ್ಯಕ್ಕೆ ಅವರ ಮನೆ ವಿಶ್ವವಿದ್ಯಾಲಯದಿಂದ ಬಸ್‌ಸ್ಟಾಂಡ್ ಮತ್ತು ರೈಲುನಿಲ್ದಾಣಗಳಿಗೂ ತುಂಬಾ ದೂರವಿದೆ. ಅದಲ್ಲದೆ ಅಲ್ಲಿಂದ ವಿಶ್ವವಿದ್ಯಾಲಯಕ್ಕೆ ಅತಿಥಿಗಳು ಬರಲು ಸೂಕ್ತ ವಾಹನ ಸೌಲಭ್ಯಗಳು ಇರುವುದಿಲ್ಲ. ಈ ಮನೆಯಲ್ಲಿ ಮಹಿಳಾ ಮತ್ತು ಪುರುಷ ಅತಿಥಿಗಳಿಗೆ ಒಟ್ಟಿಗೆ ವ್ಯವಸ್ಥೆ ಮಾಡುವುದು ಕಷ್ಟ. ಸದರಿ ಮನೆಗೆ ತಿಂಗಳಿಗೆ ರೂ.30,000/- ಬಾಡಿಗೆ ಇರುವುದರಿಂದ ವರ್ಷಕ್ಕೆ (30,000X12)=ರೂ.3,60,000/- ವೆಚ್ಚವಾಗುವದರ ಜೊತೆಗೆ ವಿದ್ಯುತ್‌ಚ್ಛಕ್ತಿ ಹಾಗೂ ಮೂವರು ಗಾರ್ಡ್‌ಗಳ ವಾರ್ಷಿಕ ವೇತನದ ಹೊಣೆಗಾರಿಗೆ ಹಾಗೂ ಅತಿಥಿಗೃಹದ ಅಡುಗೆಯವರ ವೇತನದ ಹೊಣೆಗಾರಿಕೆಯನ್ನು ವಿಶ್ವವಿದ್ಯಾಲಯ ಭರಿಸಬೇಕಾಗುತ್ತದೆ. ಇದನ್ನು ಸಧ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ನಿಭಾಯಿಸುವದು ಕಷ್ಟ. ಈ ಹಿನ್ನೆಲೆಯಲ್ಲಿ ನಗರದ ಹೃದಯಭಾಗದಲ್ಲಿರುವ ಹೋಟೆಲಗಳ ದರ ಹಾಗೂ ಸೌಲಭ್ಯಗಳನ್ನು ಪರಿಗಣಿಸಿ, ಸೂಕ್ತ ಹೋಟಲನ್ನು ಅತಿಥಿಗೃಹದ ಸೌಲಭ್ಯಕ್ಕೆ ಒದಗಿಸಲು ಕ್ರಮಕೈಗೊಳಬಹುದಾಗಿದೆ. ಕಾರಣ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಮುಂದಿನ ಸೂಕ್ತ ನಿರ್ದೇಶನಕ್ಕಾಗಿ ಮಂಡಿಸಿದೆ.

*ನಿರ್ಣಯ:- ಅನುಮೋದಿಸಲಾಯಿತು*

## ಸಿಂಡಿಕೇಟ್ ಐಟಂ ಸಂಖ್ಯೆ : 21/93

**ವಿಷಯ:** ವಿವಿಧ ಕೋರ್ಸುಗಳ ಕ್ರಮನಿಯಮಾವಳಿಗಳನ್ನು ಅನುಮೋದಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:03-08-2016ರಂದು ಜರುಗಿದ ಕ್ರಮನಿಯಮಾವಳಿ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿವಿಧ ಕೋರ್ಸುಗಳ ಕ್ರಮನಿಯಮಾವಳಿಗಳು ಈ ಕೆಳಗಿನಂತಿವೆ.

1. ಸ್ನಾತಕ ಹಾಗೂ ಸ್ನಾತಕೋತ್ತರ ಏಕರೂಪ ಕ್ರಮನಿಯಮಾವಳಿ ಅನುಸಾರ ವಿಶ್ವವಿದ್ಯಾಲಯದ ಕ್ರಮನಿಯಮಾವಳಿಗಳನ್ನು ತಯಾರಿಸುವುದು.
2. ಬಿ.ಎಡ್ ಹಾಗೂ ಎಂ.ಎಡ್ ಕೋರ್ಸುಗಳಿಗೆ ಏಕರೂಪ ಕ್ರಮನಿಯಮಾವಳಿ ಅನುಸಾರ ವಿಶ್ವವಿದ್ಯಾಲಯದ ಕ್ರಮನಿಯಮಾವಳಿಗಳನ್ನು ತಯಾರಿಸುವುದು.
3. ಬಿ.ಪಿ.ಎಡ್ ಹಾಗೂ ಎಂ.ಪಿ.ಎಡ್ ಕೋರ್ಸುಗಳಿಗೆ ಏಕರೂಪ ಕ್ರಮನಿಯಮಾವಳಿ ಅನುಸಾರ ವಿಶ್ವವಿದ್ಯಾಲಯದ ಕ್ರಮನಿಯಮಾವಳಿಗಳನ್ನು ತಯಾರಿಸುವುದು.
4. Karnataka State Women's University Regulations of Doctoral Degree(Ph.D) programme, 2010 & Karnataka State Women's University Regulation of M.Phil course, 2010, UGC Amendment 2016.

ಎಂ.ಫಿಲ್ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಕಾಲಾವಧಿಯು ಒಂದು ವರ್ಷದ ಬದಲಿಗೆ ಎರಡು ವರ್ಷ ಮತ್ತು ಪಿಎಚ್.ಡಿ ಕೋರ್ಸ್‌ನ ಕಾಲಾವಧಿ ಆರು ವರ್ಷದಿಂದ ಎಂಟು ವರ್ಷಕ್ಕೆ ಹಿಗ್ಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಅವಧಿಯಲ್ಲಿ ಸಂಶೋಧನಾ ವಿದ್ಯಾರ್ಥಿಯು ಒಂದು ಬಾರಿ ಹೆರಿಗೆ ರಜೆಯನ್ನು ಪಡೆಯಬಹುದಾಗಿದೆ. ಕ್ರಮನಿಯಮಾವಳಿಯು ಕುಲಾಧಿಪತಿಗಳಿಂದ ಅನುಮೋದನೆಗೊಂಡಂದಿನಿಂದ ಜಾರಿಗೆ ಬರುತ್ತದೆ. ಆದರೆ ಹೆರಿಗೆ ರಜೆ ಮತ್ತು ಕೋರ್ಸ್‌ಗಳ ಕಾಲಾವಧಿಯನ್ನು ಹಿಗ್ಗಿಸುವುದನ್ನು ಈ ಶೈಕ್ಷಣಿಕ ವರ್ಷದಿಂದ ಜಾರಿಗೆ ತಂದಲ್ಲಿ ಕೆಲವು ವಿದ್ಯಾರ್ಥಿಗಳಿಗೆ ನೆರವಾಗುತ್ತದೆ ಎಂಬ ಕಾರಣದಿಂದ ಜಾರಿಗೊಳಿಸಲು ಸಭೆಯು ಒಪ್ಪಿಗೆ ನೀಡಿತು. ಪ್ರಸ್ತುತ ಜಾರಿಯಲ್ಲಿರುವ ಕ್ರಮನಿಯಮಾವಳಿಯಲ್ಲಿ ಕುಲಪತಿಗಳಿಗೆ ವಿವೇಚನಾಧಿಕಾರ ಇರುವ ಹಿನ್ನೆಲೆಯಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಿಂದ ವಿದ್ಯಾವಿಷಯಕ ಪರಿಷತ್‌ನ ಅನುಮೋದನೆ ಪಡೆದು ಜಾರಿಗೆ ತರಬಹುದಾಗಿದ್ದು, ಇದಕ್ಕೆ ದಿನಾಂಕ:08-08-2016ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಅನುಮೋದಿಸಲಾಯಿತು***

## ಸಿಂಡಿಕೇಟ್ ಐಟಂ ಸಂಖ್ಯೆ : 22/93

ವಿಷಯ: ನ್ಯಾಕ್ ಸಮಿತಿಯ ವರದಿ.

ರಾಷ್ಟ್ರೀಯ ಮೌಲ್ಯಾಂಕನ ಮಾನ್ಯತಾ ಮಂಡಳಿ NAAC(ನ್ಯಾಕ್)ಯ ಉನ್ನತ ಮಟ್ಟದ ತಜ್ಞರ ತಂಡ 2016ರ ಜನವರಿ ತಿಂಗಳ 20ರಿಂದ 23ರ ವರೆಗೆ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಒಡಿಸಾದ ಕೇಂದ್ರೀಯ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ ಸುರಭಿ ಬ್ಯಾನರ್ಜಿ ಅವರ ನೇತೃತ್ವದ ಒಂಬತ್ತು ತಜ್ಞರ ತಂಡ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು, ನಿರ್ದೇಶನಾಲಯಗಳು, ಅಧ್ಯಯನ ಕೇಂದ್ರಗಳು, ಮಹಿಳಾ ತಂತ್ರಜ್ಞಾನ ಪಾರ್ಕ್, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಪ್ರಸಾರಾಂಗ, ಶಿಶುಪಾಲನಾ ಕೇಂದ್ರ, ವಸತಿ ನಿಲಯಗಳು, ಆಡಳಿತ ವಿಭಾಗ, ಶೈಕ್ಷಣಿಕ ವಿಭಾಗ, ಪರೀಕ್ಷಾ ವಿಭಾಗ, ಆರ್ಥಿಕ ವಿಭಾಗ, ಎಂಜನಿಯರಿಂಗ್ ವಿಭಾಗ ಮುಂತಾದ ಕಡೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಪ್ರೊ.ಸುರಭಿ ಬ್ಯಾನರ್ಜಿ ಅವರು ಸಲ್ಲಿಸಿದ ವರದಿಯ ಆಧಾರದಲ್ಲಿ ರಾಷ್ಟ್ರೀಯ ಮೌಲ್ಯಾಂಕನ ಮಾನ್ಯತಾ ಮಂಡಳಿಯು (ನ್ಯಾಕ್) ನಮ್ಮ ವಿಶ್ವವಿದ್ಯಾಲಯಕ್ಕೆ 'B' ಗ್ರೇಡ್ ಮಾನ್ಯತೆ ನೀಡಿದೆ. ನ್ಯಾಕ್ ಸಮಿತಿ ತನ್ನ ವರದಿಯಲ್ಲಿ

ಮಾಡಿರುವ ಶಿಫಾರಸುಗಳನ್ನು ವಿಶ್ವವಿದ್ಯಾಲಯ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ನ್ಯಾಕ್ ಸಮಿತಿ ವರದಿಯನ್ನು ಸಿಂಡಿಕೇಟ್‌ನ ಅವಗಾಹನೆ ಮತ್ತು ಅನುಮೋದನೆಗೆ ಮಂಡಿಸಿದೆ.

ಮಾನ್ಯ ಕುಲಪತಿಗಳು ನ್ಯಾಕ್ ಸಮಿತಿ ವರದಿಯ ವಿಶೇಷಾಂಶಗಳು ಓದಿ ತಿಳಿಸಿದರು.

**1. ಸಮಿತಿ ವಿಶ್ವವಿದ್ಯಾನಿಲಯದ ಕುರಿತು ಗುರುತಿಸಿದ ವಿಶೇಷಾಂಶಗಳು**

- ಮಹಿಳಾ ತಂತ್ರಜ್ಞಾನ ಅಭಿವೃದ್ಧಿ ಪಾರ್ಕ್‌ನ ಸ್ಥಾಪನೆ ಮಾಡಿರುವುದು.
- ಶಿಕ್ಷಣ ತೊರೆದವರಿಗೆ ಮುಂದುವರಿಕೆಗೆ ಅವಕಾಶ ನೀಡಿರುವುದು.
- ಸಾಮಾಜಿಕವಾಗಿ + ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿನಿಯರಿಗೆ ನೆರವು ಮತ್ತು ಪ್ರೋತ್ಸಾಹ ನೀಡುತ್ತಿರುವುದು.
- ಹಿರಿಯ ಸಂಶೋಧನಾ ವಿದ್ಯಾರ್ಥಿಗಳನ್ನು ಅರೆಕಾಲಿಕ ಅಧ್ಯಾಪಕರಾಗಿ ಒಳಗೊಳಿಸುವಿಕೆ.

**2. ವಿಶ್ವವಿದ್ಯಾನಿಲಯದ ಶಕ್ತಿ:**

- ಕ್ಯಾಂಪಸ್ ಬದುಕು ಮಿತವೆಚ್ಚದ್ದಾಗಿರುವುದು.
- Vibrant & motivated student body ಇರುವುದು.

**3. ಸಮಿತಿ ಗುರುತಿಸಿದ ವಿಶ್ವವಿದ್ಯಾನಿಲಯದ ಮಿತಿಗಳು:**

- ಅತಿಥಿ ಉಪನ್ಯಾಸಕರು ಹೇರಳವಾಗಿರುವುದು.
- ತಾತ್ಕಾಲಿಕ ನೆಲೆಯ ಶಿಕ್ಷಕೇತರ ಸಿಬ್ಬಂದಿ.
- ಸಾಮಾನ್ಯ ದರ್ಜೆಯ ಸಂಶೋಧನೆ & ಸಾಕಷ್ಟು ಪ್ರಕಟಣೆಗಳು ಇಲ್ಲದಿರುವುದು.
- ಸಂಶೋಧನೆಗೆ ಅನುದಾನದ ಕೊರತೆ.
- ವೈಫೈ(wifi) ಇಲ್ಲದಿರುವುದು.
- ವಸತಿ ಸೌಲಭ್ಯದ ಕೊರತೆ.

**4. ಸಮಿತಿಯ ಶಿಫಾರಸ್ಸುಗಳು:**

- ಶಿಕ್ಷಕ/ಶಿಕ್ಷಕೇತರ ಸಿಬ್ಬಂಧಿಗಳ ನೇಮಕಾತಿ ಆಗಬೇಕು.
- ಹೊಸ ಕೋರ್ಸುಗಳನ್ನು ಆರಂಭಿಸಬೇಕು.
- ವಿದ್ಯಾರ್ಥಿನಿಯರಿಗೆ 'ಮೆಂಟರಿಂಗ್' ಪದ್ಧತಿ ಜಾರಿ ಮಾಡಬೇಕು.
- ಅಂತರ್‌ರಾಷ್ಟ್ರೀಯ ನೆಲೆಯಲ್ಲಿ Collboration ಮಾಡಿಕೊಳ್ಳಬೇಕು.
- ಹಳೆಯ ವಿದ್ಯಾರ್ಥಿ ಸಂಘದ ಪರಿಣಾಮಕಾರಿ ಬಳಕೆಯಾಗಬೇಕು.
- Spoken English Course ಎಲ್ಲರಿಗೂ ವಿಸ್ತರಣೆಯಾಗಬೇಕು.

***ನಿರ್ಣಯ:- ಅನುಮೋದಿಸಲಾಯಿತು***

## *ಸಿಂಡಿಕೇಟ್ ಐಟಂ ಸಂಖ್ಯೆ : 23/93*

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವನ್ನು ಮಹಿಳಾ ಸ್ನೇಹಿಯಾಗಿ ಮಾಡುವ ಉದ್ದೇಶದಿಂದ ಮುಂದಿನ ಐದು ವರ್ಷಗಳ ಅವಧಿಗೆ ಕ್ರಿಯಾ ಯೋಜನೆ ರೂಪಿಸಲು ಎರಡು ದಿನಗಳ ದುಂಡು ಪರಿಷತ್ತಿನ

ಸಭೆಯನ್ನು ಜರುಗಿಸಬೇಕಾಗಿದೆ. ಈ ಸಭೆಗೆ ಉನ್ನತ ಶೈಕ್ಷಣಿಕ ತಜ್ಞರು, ಕೈಗಾರಿಕೋದ್ಯಮಿಗಳು, ಮಹಿಳಾ ಚಿಂತಕರು, ಪಾಲಕರು, ಹಳೆಯ ವಿದ್ಯಾರ್ಥಿನಿಯರು, ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಡೀನರು ವಿಶ್ವವಿದ್ಯಾಲಯದ ಶಿಕ್ಷಕರು ಭಾಗವಹಿಸಿ Vision 2021 ತಯಾರಿಸಬೇಕಾಗಿದೆ. ಈ ಸಭೆ ವಿಶ್ವವಿದ್ಯಾಲಯದ ಶೈಕ್ಷಣಿಕ ಮುನ್ನಡೆಗೆ ಉಪಯುಕ್ತವಾಗಿದೆ. ಸದರಿ ಸಭೆಗೆ ಡಾ.ಮಾಧವ ಮೆನನ್, ಡಾ.ಪಂಕಜ ಮಿತ್ತಲ, ಡಾ.ಬಲರಾಮ ಮುಂತಾದ ಗಣ್ಯರನ್ನು ಆಹ್ವಾನಿಸಲಾಗುತ್ತದೆ. ಗಣ್ಯರು ನೀಡಿದ ದಿನಾಂಕದಂದು ಎರಡು ದಿನಗಳ ಸಭೆ ನಡೆಸಲಾಗುವುದು ಆದ್ದರಿಂದ ಈ ಸಭೆಗೆ ಅಂದಾಜು ರೂ.9,50,000/- ವೆಚ್ಚವಾಗಬಹುದು, ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಅನುಮೋದಿಸಲಾಯಿತು ಹಾಗೂ 13,14 ಅಕ್ಟೋಬರ್ 2016 ರಂದು*** **ದುಂಡು ಪರಿಷತ್ತಿನ ಸಭೆಯನ್ನು ಜರುಗಿಸುವ ಕುರಿತು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.**

## ***ಸಿಂಡಿಕೇಟ್ ಐಟಂ ಸಂಖ್ಯೆ : 24/93***

ವಿಷಯ: ದಿನಾಂಕ:25-08-2016ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು***

## ***ಸಿಂಡಿಕೇಟ್ ಐಟಂ ಸಂಖ್ಯೆ : 25/93***

ವಿಷಯ: ದಿನಾಂಕ:19-8-2016 ರಂದು ಜರುಗಿದ ಹಾಸ್ಟೆಲ್ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಹಾಸ್ಟೆಲ್ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು***

## ***ಸಿಂಡಿಕೇಟ್ ಐಟಂ ಸಂಖ್ಯೆ : 26/93***

ವಿಷಯ: ದಿನಾಂಕ: 29-08-2016ರಂದು ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು***

## ***ಸಿಂಡಿಕೇಟ್ ಐಟಂ ಸಂಖ್ಯೆ : 27/93***

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಸಿ.ಪಾಟೀಲ ಇವರು ಈ ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.**

1. **ವಿಷಯ:- ಸಿಂಧನೂರಿನಲ್ಲಿ ಕರಾಮವಿವಿ ಯ ನೂತನ ಸ್ನಾತಕೋತ್ತರ ಕೇಂದ್ರದ ಸ್ಥಾಪನೆಗೆ ಸಹಕರಿಸಿದ ಸಕಲರಿಗೂ ಅಭಿನಂದನೆ ಸಲ್ಲಿಸುವ ಕುರಿತು.**

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ನೂತನ ಸ್ನಾತಕೋತ್ತರ ಕೇಂದ್ರ ಸ್ಥಾಪನೆಗೆ ಸಹಕರಿಸಿದ ಸಿಂಧನೂರು ಕ್ಷೇತ್ರದ ಜನಪರ ಶಾಸಕರಾದ ಬಾದರ್ಲಿ ಹಂಪನಗೌಡ, ಗೌರಾವಾನ್ವಿತ ಉನ್ನತಶಿಕ್ಷಣ ಸಚಿವರಾದ ಬಸವರಾಜ ರಾಯರಡ್ಡಿ, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಭರತ್‌ಲಾಲ್

ಮೀನಾ, ಆದರಣೀಯ ಕುಲಪತಿಗಳು, ಮಾನ್ಯ ಕುಲಸಚಿವರು, ಸಿಂಡಿಕೇಟ್ ಹಾಗೂ ವಿದ್ಯಾ ವಿಷಯಕ್ ಪರಿಷತ್ ಸದಸ್ಯರು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಸಕಲ ವಿಶ್ವವಿದ್ಯಾಲಯದ ಸಿಬ್ಬಂದಿಗೆ ನನ್ನ ಹೃದಯಪೂರ್ವಕ ಅಭಿನಂದನೆಗಳು ಮತ್ತು ಈ ಸಹಕಾರ ಸದಾ ಹೀಗೆ ಮುಂದುವರೆಯಲಿ ಎಂದು ಆಶಿಸುತ್ತೇನೆ ಎಲ್ಲರಿಗೂ ಧನ್ಯವಾದಗಳು.

**ನಿರ್ಣಯ:– ಪ್ರಸ್ತಾವನೆಗೆ ಪ್ರತಿಯಾಗಿ ಸ್ನಾತಕೋತ್ತರ ಕೇಂದ್ರದ ಸ್ಥಾಪನೆಗೆ ದುಡಿದ *ಸನ್ಮಾನ್ಯ ಶ್ರೀ.ಹಂಪನಗೌಡ ಬಾದರ್ಲಿ ಮತ್ತು ಶ್ರೀ ಆರ್.ಸಿ.ಪಾಟೀಲ ಅವರಿಗೆ ಅಭಿನಂದನೆಗಳನ್ನು ಎಲ್ಲರೂ ತಿಳಿಸಿದರು.***

**2. ವಿಷಯ:– ವಿಶ್ವವಿದ್ಯಾಲಯದ ಸಹಕಾರದಿಂದ ಆಯೋಜಿಸುವ ಯುವಜನೋತ್ಸವಕ್ಕೆ ಸ್ಪರ್ಧಾಳುಗಳಿಂದ ಶುಲ್ಕ ಪಡೆಯುವುದನ್ನು ರದ್ದು ಪಡಿಸುವ ಕುರಿತು.**

ಕರಾಮವಿವಿಯ ಸಹಕಾರದಿಂದ ವಿಶ್ವವಿದ್ಯಾಲಯದ ಸಂಲಗ್ನತೆಗೆ ಒಳಪಟ್ಟಿರುವ ಕಾಲೇಜುಗಳ ಆಯೋಜನೆಯಲ್ಲಿ ನಡೆಸುವ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿಶ್ವವಿದ್ಯಾಲಯದ ಸ್ಪರ್ಧಾಳುಗಳಿಂದ ನೋಂದಣಿ ಶುಲ್ಕ ಪಡೆಯುವುದರಿಂದ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ. ಇದರಿಂದ ಭಾಗವಹಿಸುವಿಕೆಯಲ್ಲಿ ಆಸಕ್ತಿ ತೋರುವುದಿಲ್ಲ. ಸಂಸ್ಥೆಯವರಿಂದಲೂ ಸಹ ಪ್ರೋತ್ಸಾಹ ಸಿಗುವುದಿಲ್ಲ. ಆದ್ದರಿಂದ ಪ್ರವೇಶ ದಾಖಲಾತಿ ಸಂದರ್ಭದಲ್ಲಿ **'ಸಾಂಸ್ಕೃತಿಕ ಶುಲ್ಕ'** ರೂಪದಲ್ಲಿ ಪ್ರತಿ ವಿದ್ಯಾರ್ಥಿನಿಯರಿಂದ ಪಡೆದು ಆಯೋಜಿಸುವ ಕಾಲೇಜುಗಳಿಗೆ ಹೆಚ್ಚಿನ ಅನುದಾನ ನೀಡುವುದರಿಂದ ವಿಶ್ವವಿದ್ಯಾಲಯವು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರೋತ್ಸಾಹ ನೀಡುವುದು ಸೂಕ್ತ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಸಮಯೋಚಿತ ಸಲಹೆ ಎಂದು ಸಭೆಯು ಅನುಮೋದಿಸಿತು.***

**3. ವಿಷಯ:– ಕರಾಮವಿವಿಯ ಸಿಂಧನೂರು ಸ್ನಾತಕೋತ್ತರ ಕೇಂದ್ರದ ಆವರಣಕ್ಕೆ 'ಜ್ಞಾನಸಿಂಧು' ಎಂದು ನಾಮಕಾರಣ ಮಾಡುವ ಕುರಿತು.**

ಕರಾಮವಿವಿಯು ಸಿಂಧನೂರಿನಲ್ಲಿ ಸ್ಥಾಪಿಸಲ್ಪಟ್ಟ ನೂತನ ಸ್ನಾತಕೋತ್ತರ ಕೇಂದ್ರಕ್ಕೆ 'ಜ್ಞಾನಸಿಂಧು ಆವರಣ' ಎಂದು ನಾಮಕಾರಣ ಮಾಡುವುದರಿಂದ ಸಿಂಧನೂರಿನ ಶೈಕ್ಷಣಿಕ ಇತಿಹಾಸಕ್ಕೆ ಹೊಸ ಚೈತನ್ಯ ತುಂಬಿದಂತಾಗುತ್ತದೆ. ಈಗಿರುವ ನಮ್ಮ 'ಜ್ಞಾನಶಕ್ತಿ' ಆವರಣಕ್ಕೆ ಈ ಹೊಸ 'ಜ್ಞಾನಸಿಂಧು' ಸೇರ್ಪಡೆಯಿಂದ ಕರಾಮವಿವಿಯು ರಾಜ್ಯದಲ್ಲಿ ಹೊಸತನಕ್ಕೆ ನಾಂದಿ ಹಾಡಿದಂತಾಗುತ್ತದೆ. 'ಸಿಂಧು' ಎನ್ನುವುದು ಮಹಿಳೆಯರಿಗೆ ಶ್ರೇಷ್ಠವಾದ ಆಭರಣವಿದ್ದಂತೆ ಮತ್ತು ನೂತನ ಸ್ನಾತಕೋತ್ತರ ಕೇಂದ್ರಸ್ಥಾನ (ಸಿಂಧನೂರು) ದ ಹೆಸರಿನ ಪ್ರಾರಂಭದ ಅಕ್ಷರವು ಆಗಿರುವುದರಿಂದ ಬಹಳ ಸೂಕ್ತ ಎಂದು ನಾನು ಭಾವಿಸಿದ್ದೇನೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಸಭೆಯು ಅನುಮೋದನೆ ನೀಡಿತು.***

**4. ವಿಷಯ:– ಕರಾಮವಿವಿಯ ಸಂಲಗ್ನತೆಗೆ ಒಳಪಟ್ಟ 10 ವರ್ಷ ಪೂರೈಸಿದ ಖಾಸಗಿ ಅನುದಾನ ರಹಿತ ಪದವಿ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಯನ್ನು ಸರಕಾರಕ್ಕೆ ಕಳುಹಿಸುವ ಕುರಿತು.**

ಕರಾಮವಿವಿ ಯ ಸಂಲಗ್ನತೆಗೆ ಒಳಪಟ್ಟ ಹೈದ್ರಾಬಾದ–ಕರ್ನಾಟಕ ಪ್ರದೇಶದ ವ್ಯಾಪ್ತಿಗೊಳಪಡುವ 10 ವರ್ಷ ಪೂರೈಸಿದ ಖಾಸಗಿ ಅನುದಾನ ರಹಿತ ಪದವಿ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಯನ್ನು ಸರಕಾರಕ್ಕೆ ಕಳುಹಿಸುವುದಕ್ಕಾಗಿ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಈ ವಿಷಯವನ್ನು ಸಿಂಡಿಕೇಟ್ ವ್ಯಾಪ್ತಿಗೆ ಬರದ ಕಾರಣ ಪ್ರಸ್ತಾವನೆಯನ್ನು ಕೈಬಿಡಲಾಯಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ: 1/93*

**ವಿಷಯ:** ಎಂ.ಬಿ.ಎ ಅಧ್ಯಯನ ವಿಭಾಗದಲ್ಲಿ ಸಹ–ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡಲು ಬಿಓಎ(BOA) ರಚಿಸಲು ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸುವ ಕುರಿತು.

ಮೇಲ್ಕಾಣಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಎಂ.ಬಿ.ಎ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ–ಪ್ರಾಧ್ಯಾಪಕರನ್ನು ಪ್ರಾಧ್ಯಾಪಕರ ಹುದ್ಧೆಗೆ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡಲು, ಬಿಓಎ(BOA) ರಚಿಸಲು, ವಿಷಯ ತಜ್ಞರ ಪಟ್ಟಿಯನ್ನು ತಯಾರಿಸಿದ್ದು ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಸಭೆಯು ಅನುಮೋದಿಸಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ: 02/93*

ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಪ್ರತಿವರ್ಷ ಬ್ಲೂಬುಕ್‌ಗಳನ್ನು ಸ್ಥಾನಿಕ ಅಭಿಯಂತರರ ವಿಭಾಗದಿಂದ ಮುದ್ರಿಸಿ ಪರೀಕ್ಷಾ ವಿಭಾಗಕ್ಕೆ ನೀಡುತ್ತಾ ಬಂದಿರುತ್ತಾರೆ. ಪ್ರತಿ ವರ್ಷ ವಿದ್ಯಾರ್ಥಿನಿಯರು ಪರೀಕ್ಷೆ ಅರ್ಜಿ ಸಲ್ಲಿಸುವಾಗ ಬ್ಲೂಬುಕ್ ಶುಲ್ಕ ಸಮೇತ ಭರಿಸುತ್ತಾ ಬಂದಿರುತ್ತಾರೆ. ಆದರೆ ಪ್ರತ್ಯೇಕವಾಗಿ ಬ್ಲೂಬುಕ್‌ಗಾಗಿ ಪಡೆಯುವ ಹಣ ಎಷ್ಟು ಎಂಬುದನ್ನು ಸ್ಪಷ್ಟಪಡಿಸಿರುವುದಿಲ್ಲ ಹಾಗೂ ಬ್ಲೂಬುಕ್ ಮುದ್ರಣದ ವೆಚ್ಚವನ್ನು ಯಾವ ಹೆಡ್ಡ್‌ನಿಂದ ಭರಿಸಬೇಕು ಎಂಬುದು ಸ್ಪಷ್ಟವಾಗಿರುವುದಿಲ್ಲ. ಸ್ನಾತಕೋತ್ತರ ಪರೀಕ್ಷೆಗಳಿಗೆ ಪಡೆಯುವ ಪರೀಕ್ಷಾ ಶುಲ್ಕ ಸ್ನಾತಕ ಪರೀಕ್ಷೆಗಳಿಗಿಂತ ಕಡಿಮೆ ಇರುತ್ತದೆ. ಸ್ನಾತಕೋತ್ತರ ಪರೀಕ್ಷಾ ಶುಲ್ಕದಲ್ಲಿ ಬ್ಲೂಬುಕ್‌ಗಳನ್ನು ಮುದ್ರಿಸಿ ವಿತರಿಸಿದರೆ ಪರೀಕ್ಷಾ ವಿಭಾಗಕ್ಕೆ ಹೊರೆಯಾಗುವುದು. ಆದ್ದರಿಂದ 2016–17 ನೇ ಶೈಕ್ಷಣಿಕ ಸಾಲಿನಿಂದ ಬ್ಲೂಬುಕ್ ಗಳನ್ನು ವಿದ್ಯಾರ್ಥಿನಿಯರಿಗೆ ಕೊಡುವುದನ್ನು ರದ್ದುಪಡಿಸುವ ಕುರಿತು ದಿನಾಂಕ:04–6–2016 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದ್ದು ಸದರಿ ಸಭೆಯಲ್ಲಿ ಈ ವಿಷಯವನ್ನು ಮುಂದೂಡಲಾಗಿತ್ತು ಆದ್ದರಿಂದ ಪುನ: ವಿಷಯವನ್ನು ಸಿಂಡಿಕೇಟ್ ಸಭೆಗೆ ಇಡಲಾಗಿದೆ.

***ನಿರ್ಣಯ:– ಈ ವಿಷಯದ ಬಗ್ಗೆ ಚರ್ಚೆ ನಡೆದು, ಬ್ಲೂಬುಕ್‌ಗಾಗಿ ಪ್ರತ್ಯೇಕ ಶುಲ್ಕವನ್ನು ವಿಶ್ವವಿದ್ಯಾನಿಲಯವು ಪಡೆಯದ ಕಾರಣ, ಮುದ್ರಿಸಿ ವಿತರಿಸುವುದನ್ನು ಕೈಬಿಡುವುದು ಸೂಕ್ತ ಎಂಬ ನಿಲುವಿಗೆ ಸಭೆಯು ಬಂದಿತು.***

***ಆದರೆ ನ್ಯಾಕ ಮಾರ್ಗಸೂಚಿಯಂತೆ, ಏಕರೂಪದ ಆಂತರಿಕ ಮೌಲ್ಯಮಾಪನ ದಾಖಲಾತಿ ಸಂಗ್ರಹಿಸಿಡುವುದು ಅಗತ್ಯ ಎಂಬ ಕಾರಣದಿಂದ, ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಮೂಲಕ ಮುದ್ರಿಸಿ, ಮಾರಾಟ ಮಾಡುವುದು ಹಾಗೂ ಈ ವರ್ಷ ಸ್ನಾತಕೋತ್ತರ ಕೋರ್ಸುಗಳಿಗೆ ಇದನ್ನು ಅಳವಡಿಸುವುದು ಸೂಕ್ತ ಎಂದು ನಿರ್ಣಯಿಸಲಾಯಿತು. ಈ ಬಗ್ಗೆ ಪ್ರಸಾರಾಂಗದ ನಿರ್ದೇಶಕರಿಗೆ ತಕ್ಷಣ ಸಿದ್ಧತೆಗೆ ಕ್ರಮಕೈಗೊಳ್ಳಲು ಸೂಚಿಸಬೇಕೆಂದು ನಿರ್ಧರಿಸಲಾಯಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ: 03/93*

ಮಾನ್ಯ ಅಧ್ಯಕ್ಷರು, ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಕರ್ನಾಟಕ ರಾಜ್ಯದಲ್ಲಿನ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದ Examination and other Remuneration to University Teachers, pay anomaly Between CAS and Direct Recruitment Professors and DA to University Teachers. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಸಲ್ಲಿಸಿದೆ.

***<u>ನಿರ್ಣಯ:–</u> ಪರೀಕ್ಷೆ ಮತ್ತು ಇತರೆ ಕಾರ್ಯಗಳಿಗೆ ಅಧ್ಯಾಪಕರಿಗೆ ನೀಡುವ ಸಂಭಾವನೆಯ ಪರಿಷ್ಕರಿಸಿದ ಬಗ್ಗೆ***

*ಹಿಂದಿನ ಸಭೆಯ ನಿರ್ಣಯಗಳನ್ನು ಅನುಷ್ಠಾನಕ್ಕೆ ತರಲು ಕಾಲಾವಕಾಶ ಬೇಕು. ಈ ಮಧ್ಯೆ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಸಂಭಾವನೆಯ ಕುರಿತಂತೆ ಏಕರೂಪ ಕಾಯಿದೆ ತರುವ ಬಗ್ಗೆ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನಿರ್ಣಯ ಕೈಗೊಂಡಿರುವುದರಿಂದ, ಅದು ಬರುವವರೆಗೆ ಈಗಿರುವ ಕ್ರಮವನ್ನೇ ಮುಂದುವರಿಸುವುದೆಂದು ಒಪ್ಪಿಕೊಳ್ಳಲಾಯಿತು.*

*ಈ ಮಧ್ಯೆ ಸಿಂಡಿಕೇಟ್ ಸದಸ್ಯರೊಬ್ಬರು ತಮಗೆ ಉಪ-ಸಮಿತಿಗೆ ಬಂದಾಗ ನೀಡುವ ಪ್ರಯಾಣ ಭತ್ಯೆ ಮತ್ತು ಆಸನ ಭತ್ಯೆ(ಸಿಟ್ಟಿಂಗ್ ಫೀ)ಕಡಿಮೆ ಇದೆ ಎಂಬ ವಿಚಾರವನ್ನು ಸಭೆಯ ಗಮನಕ್ಕೆ ತಂದರು. ಸಿಂಡಿಕೇಟ್ ಸಭೆಯ ವೇಳೆಗೆ ನೀಡುವ ಸೌಲಭ್ಯಗಳು ಉಪ-ಸಮಿತಿ ಸಭೆಗಳಿಗೆ ನೀಡಲಾಗುವುದಿಲ್ಲ. ವಾಹನ ಭತ್ಯೆಯನ್ನು ಕಿ.ಮೀ.ಗೆ ರೂ.8/-ರಂತೆ ನೀಡುವುದು ಹಾಗೂ ಆಸನ ಭತ್ಯೆ(ಸಿಟ್ಟಿಂಗ್ ಫೀ) ರೂ.1,000/-(ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್‌ನ ಸದಸ್ಯರಿಗೆ ಮಾತ್ರ) ಎಂದು ಸ್ಪಷ್ಟಪಡಿಸಲಾಯಿತು.*

## *ಸಿಂಡಿಕೇಟ್ ಪುರವಣಿ ಸಂಖ್ಯೆ: 04/93*

2016-17ನೇ ಶೈಕ್ಷಣಿಕ ಸಾಲಿನಲ್ಲಿ ಈ ಕೆಳಕಂಡ ವಿಷಯಗಳ Intake ಹೆಚ್ಚಿಸಿದ ಕುರಿತು.

| Sl. no | Subject | Intake | Admitted | Fraction rounded seat | NCC/ NSS | Ex-Service | Special App. | Out of State | Pay-ment | Total |
|---|---|---|---|---|---|---|---|---|---|---|
| JNANASHAKTI CAMPUS, VIJAYAPURA | | | | | | | | | | |
| 1. | Physics | 30+10 | 30 | 2 | 1 | 1 | 1 | 3 | 13 | 51 |
| 2. | Mathmatics | 30+10 | 30 | 2 | 1 | 1 | 0 | 0 | 19 | 53 |
| 3. | Chemistry | 20+10 | 20 | 2 | 1 | 0 | 0 | 0 | 10 | 33 |
| 4. | Journalism & Mass Communi-cation | 20+10 | 29 | 0 | 0 | 0 | 0 | 0 | 0 | 29 |
| MANDYA EXTENSION CENTRE | | | | | | | | | | |
| 1. | M.Com | 60 | 65 | 0 | 0 | 0 | 0 | 0 | 0 | 65 |
| SINDHANOOR EXTENSION CENTRE | | | | | | | | | | |
| 1. | M.Com | 45 | 0 | 0 | 0 | 0 | 0 | 0 | | 0 |
| 2. | English | 30 | 0 | 0 | 0 | 0 | 0 | 0 | | 0 |
| 3. | Mathemat-ics | 20 | 0 | 0 | 0 | 0 | 0 | 0 | | 0 |
| 4. | Computer Science | 20 | 0 | 0 | 0 | 0 | 0 | 0 | | 0 |

*ನಿರ್ಣಯ:- ಅನುಮೋದಿಸಲಾಯಿತು*

## *ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಚಾರಗಳು*

1. **ವಿಷಯ:-** ವಿಶ್ವವಿದ್ಯಾನಿಲಯದ ಶಿಕ್ಷಕರ ಜೇಷ್ಠತಾ ಪಟ್ಟಿಯ ಕುರಿತಂತೆ ಡಾ.ವೆಂಕೋಬ ನಾರಾಯಣಪ್ಪ ಅವರು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು/ಬುಡಕಟ್ಟುಗಳ ಆಯೋಗಕ್ಕೆ ಆಕ್ಷೇಪ ಸಲ್ಲಿಸಿದ್ದು, ಈ ಬಗ್ಗೆ ವಿಶ್ವವಿದ್ಯಾನಿಲಯದ ಸ್ಪಷ್ಟೀಕರಣವನ್ನೂ ನೀಡಲಾಗಿದ್ದು, ಈಗ ಆಯೋಗವು ಬಿ.ಎಡ್ ಮತ್ತು ಎಂ.ಎಡ್ ಕೋರ್ಸಿನ ಜೇಷ್ಠತಾ ಪಟ್ಟಿಯ ಬಗ್ಗೆ ನಿರ್ದೇಶನ ನೀಡಿರುವುದನ್ನು ಸದಸ್ಯರಿಗೆ ಮಾನ್ಯ ಕುಲಪತಿಗಳು ತಿಳಿಸಿದರು.

ಆಯೋಗದ ಪತ್ರದ ಪ್ರತಿಯನ್ನು ನೀಡಲು ಸದಸ್ಯರು ಕೋರಿದರು. ಪ್ರೊ. ವಿಜಯಶ್ರೀ ಸಬರದ ಮತ್ತು ಡಾ.ಸತ್ಯಾನಂದ ಪಾತ್ರೋಟ ಅವರ ಅಧ್ಯಕ್ಷತೆಯಲ್ಲಿ ಸಿದ್ಧಪಡಿಸಿದ ಜೇಷ್ಠತಾ ಪಟ್ಟಿಗಳ ಬಗೆಗೂ ಚರ್ಚೆ ನಡೆಯಿತು.

*ನಿರ್ಣಯ:– ಬಿ.ಎಡ್ ಮತ್ತು ಎಂ.ಎಡ್ ಕೋರ್ಸುಗಳು ಪ್ರತ್ಯೇಕ ಅಸ್ತಿತ್ವವನ್ನು ಹೊಂದಿರುವಂಥವು. ಹಾಗಾಗಿ ಜೇಷ್ಠತಾ ಪಟ್ಟಿಯೂ ಪ್ರತ್ಯೇಕ ಆಗಬೇಕು. ಆದಾಗ್ಯೂ ಆಯೋಗ ನೀಡಿದ ನಿರ್ದೇಶನವನ್ನು ವಿಶ್ವವಿದ್ಯಾನಿಲಯ ಎಷ್ಟರಮಟ್ಟಿಗೆ ಪಾಲಿಸುವುದು ಕಡ್ಡಾಯ ಎಂಬ ಬಗ್ಗೆ ಕಾನೂನು ತಜ್ಞರ ಸಲಹೆಯನ್ನು ತಕ್ಷಣ ಪಡೆದು, ಅದರಂತೆ ಕ್ರಮ ಕೈಗೊಳ್ಳುವುದೆಂದು ನಿರ್ಧರಿಸಲಾಯಿತು.*

2. ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಸಿ.ಪಾಟೀಲ ಅವರು ಸಿಂಧನೂರಿನ ಸ್ನಾತಕೋತ್ತರ ಕೇಂದ್ರಕ್ಕೆ ಆರು ಎಕರೆ ಜಮೀನನ್ನು ಕಾಯ್ದಿರಿಸಿ, ಆದೇಶ ಹೊರಡಿಸಿರುವ ದಾಖಲೆಯನ್ನು ಸದಸ್ಯರಿಗೆ ನೀಡಿದರು.

   *ನಿರ್ಣಯ:– ಸಕಾಲಕ್ಕೆ ಜಮಿನಿನ ಹಕ್ಕುಪತ್ರ ಸಿದ್ಧಗೊಂಡ ಬಗ್ಗೆ ಸದಸ್ಯರು ಹರ್ಷ ವ್ಯಕ್ತಪಡಿಸಿ, ಸನ್ಮಾನ್ಯ ಶ್ರೀ.ಹಂಪನಗೌಡ ಬಾದರ್ಲಿ ಮತ್ತು ಶ್ರೀ ಆರ್.ಸಿ.ಪಾಟೀಲ ಅವರನ್ನು ಅಭಿನಂದಿಸಿದರು.*

3. ಸಿಂಡಿಕೇಟ್ ಸದಸ್ಯರಾದ ಮಾನ್ಯ ಸುಜಾತಾ ಎಸ್ ಜಂಗಮಶೆಟ್ಟಿ ಅವರು ವಿಶ್ವವಿದ್ಯಾನಿಲಯದಲ್ಲಿ ಪದವಿ ಮತ್ತು ಸ್ನಾತಕ ಪದವಿ ಪಠ್ಯದಲ್ಲಿ ಮನಃಶಾಸ್ತ್ರವನ್ನು ಐಚ್ಚಿಕ ಪತ್ರಿಕೆಯಾಗಿ ಬೋಧಿಸಲು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಮನಃಶಾಸ್ತ್ರದ ಸಂಘದವರ ಮನವಿಯನ್ನು ಸಭೆಯ ಗಮನಕ್ಕೆ ತಂದರು.

   *ನಿರ್ಣಯ:– ಮುಂದಿನ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಇಟ್ಟು, ಮನವಿಯನ್ನು ಸಹಾನುಭೂತಿಯಿಂದ ಪರಿಶೀಲಿಸಬಹುದಾಗಿದೆ ಎಂದು ಸಭೆಯು ನಿರ್ಣಯಿಸಿತು.*

4. ಸಿಂಡಿಕೇಟ್ ಸದಸ್ಯರು ಸಭೆಗೆ ಭಾಗವಹಿಸಲು ಬಂದಾಗ, ವಿಶ್ರಾಂತಿ ಕೊಠಡಿಯೊಂದನ್ನು ಒದಗಿಸಬೇಕಾಗಿ ಕೋರಿದರು.

   *ನಿರ್ಣಯ:– ಮುಂದಿನ ಸಭೆಗೆ ಬರುವಷ್ಟರಲ್ಲಿ ಆ ಬಗ್ಗೆ ವ್ಯವಸ್ಥೆ ಮಾಡಲಾಗುವುದು ಎಂದು ಮಾನ್ಯ ಕುಲಪತಿಗಳು ತಿಳಿಸಿದರು.*

ಕೊನೆಯದಾಗಿ ಸಿಂಡಿಕೇಟ್ ಸದಸ್ಯರುಗಳು ಇತಿಹಾಸ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ.ರಮಾ ಗುಂಡುರಾವ ಅನ್ನುವ ಅಭ್ಯರ್ಥಿಗೆ ಆಯ್ಕೆ ಮಾಡುವಾಗ ಅನ್ಯಾಯವಾಗಿದೆ ಎಂಬ ಬಗ್ಗೆ ಅಭ್ಯರ್ಥಿ ಅವರಿಂದ ತಮಗೆಲ್ಲರಿಗೆ ಪತ್ರ ಬಂದಿರುವುದಾಗಿ ತಿಳಿಸಿ, ಆ ಬಗ್ಗೆ ಹೆಚ್ಚಿನ ಮಾಹಿತಿ ನೀಡಬೇಕೆಂದು ಕೋರಿದರು.

*ನಿರ್ಣಯ:– ಈ ಬಗ್ಗೆ ದೀರ್ಘವಾಗಿ ಚರ್ಚೆ ನಡೆದು ಸನ್ಮಾನ್ಯ ಸಿಂಡಿಕೇಟ್ ಸದಸ್ಯರು ಯಾವುದೇ ವಿವಾದ ಇಲ್ಲದೆ 31 ಕೋರ್ಸುಗಳ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿರುವುದನ್ನು ಗಮನಿಸಬೇಕಿತ್ತು. ಸದರಿ ಇತಿಹಾಸ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ.ರಮಾ ಗುಂಡುರಾವ ಅವರ ಆಯ್ಕೆಯು ನೇಮಕಾತಿ ಮಂಡಳಿಯ ಒಟ್ಟು ಅಭಿಪ್ರಾಯವಾಗಿರುವುದು ಮತ್ತು ಯಾವುದೇ ಪಕ್ಷಪಾತ ಧೋರಣೆ ಮಾಡಿರುವುದಿಲ್ಲ, ಈ ಬಗ್ಗೆ ಹೆಚ್ಚಿನ ಚರ್ಚೆ ಅಗತ್ಯವಿಲ್ಲ, ಆಸಕ್ತಿ ಇದ್ದವರು ಬಂದು ಆಯ್ಕೆ ಸಮಿತಿ ನೀಡಿದ ನಡವಳಿಯನ್ನು ಗಮನಿಸಬಹುದು ಎಂದು ತಿಳಿಸಿದರು.*

ಕುಲಸಚಿವರಾದ ಪ್ರೊ.ಕೆ.ಪಿ.ಶ್ರೀನಾಥ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.

-sd-
**ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿಗಳು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ

-sd-
**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ